

Bapuji Educational Association (R.)
Bapuji Institute of Engineering and Technology, Davangere-04
Hearty Congratulations to V T U Rank Holders
5th Top Rank Getting Institute under V T U (2020-21)
Jameer Aslam Bargir
Textile Tech
VTU Gold Medalist & 1st Rank
K Suchitra
M Tech Environmental Engineering
VTU Gold Medalist & 1st Rank
Nitesh Das
Textile Tech
2nd Rank
Yashraj S Patil
Chemical
3rd Rank
Chaitra S
Textile Tech
3rd Rank
Pramod P
Textile Tech
5th Rank
N B Akshatha
Textile Tech
6th Rank
Ranjitha H K
Textile Tech
7th Rank
Pragati G
Textile Tech
10th Rank
Mohanraj B
M.Tech Environmental Engineering, 3rd Rank
Umesha H L
M.Tech Environmental Engineering, 5th Rank
Bhoomika K V
M.Tech Structural Engineering, 6th Rank
Swathi R K
MBA
9th Rank
Muhammed Mannan
M.Tech Structural Engineering, 10th Rank
Hearty Congratulations From
Dr Shamanuru Shivashankarappa
Hon. Secretary
Sri S S Mallikarjun
Hon. Joint Secretary
Sri Rajanahalli Ramanand
President
Bapuji Educational Association (R), Davangere
Director, Principal, Deans, HODs, Staff & Students of BIET

# ಬಿಐಇಟಿಗೆ 14 ರ್‍ಯಾಂಕ್, 2 ಚಿನ್ನದ ಪದಕ

ದಾವಣಗೆರೆ, ಮಾ. 12- ನಗರದ ಬಿಐಇಟಿ ಕಾಲೇಜಿನ ವಿದ್ಯಾರ್ಥಿಗಳು ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ನಡೆಸಿದ 2020-21 ನೇ ವರ್ಷದ ಪರೀಕ್ಷೆಗಳಲ್ಲಿ 14 ರ್‍ಯಾಂಕ್‌ಗಳನ್ನು ಗಳಿಸುವ ಮೂಲಕ ಕಾಲೇಜಿನ ಹಿರಿಮೆಯನ್ನು ಹೆಚ್ಚಿಸಿದ್ದಾರೆ ಎಂದು ಪ್ರಾಚಾರ್ಯ ಡಾ. ಹೆಚ್.ಬಿ. ಅರವಿಂದ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜವಳಿ ವಿಭಾಗದಲ್ಲಿ ಜಮೀರ್ ಅಸ್ಲಂ ಬಾರ್ಗೀರ್ ಪ್ರಥಮ, ಹಿತೇಶ್ ದಾಸ್ 2 ನೇ ರ್‍ಯಾಂಕ್, ಎಶ್ರಾಜ್ ಪಾಟೀಲ್ ಕೆಮಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ, ಎಸ್. ಚೈತ್ರಾ ಜವಳಿ ವಿಭಾಗದಲ್ಲಿ 3 ನೇ ರ್‍ಯಾಂಕ್ ಪಡೆದಿದ್ದಾರೆ.

ಜವಳಿ ವಿಭಾಗದಲ್ಲಿ ಪಿ. ಪ್ರಮೋದ್, ಎನ್.ಬಿ. ಅಕ್ಷತಾ, ಹೆಚ್.ಕೆ. ರಂಜಿತಾ, ಜಿ. ಪ್ರಗತಿ ಇವರು ಕ್ರಮವಾಗಿ 5,6,7 ಮತ್ತು 10 ನೇ ರ್‍ಯಾಂಕ್ ಪಡೆದಿದ್ದಾರೆ.

ಎಂ.ಟೆಕ್. ಪರಿಸರ ತಂತ್ರಜ್ಞಾನ ವಿಭಾಗದಲ್ಲಿ ಕೆ. ಸುಚಿತ್ರಾ ಪ್ರಥಮ ರ್‍ಯಾಂಕ್, ಬಿ. ಮೋಹನ್ ರಾಜ್, ಹೆಚ್.ಎನ್. ಉಮೇಶ್ 3 ಮತ್ತು 5 ನೇ ರ್‍ಯಾಂಕ್ ಗಳಿಸಿದ್ದಾರೆ.

ಎಂ.ಟೆಕ್. ಸ್ಟ್ರಕ್ಚರ್ ವಿಭಾಗದಲ್ಲಿ ಕೆ.ವಿ. ಭೂಮಿಕ ಮತ್ತು ಮೊಹಮ್ಮದ್ ಮನ್ನಾನ್ ಕ್ರಮವಾಗಿ 6 ಮತ್ತು 10 ನೇ ರ್‍ಯಾಂಕ್, ಎಂಬಿಎ ನಲ್ಲಿ ಆರ್.ಕೆ. ಸ್ವಾತಿ 9 ನೇ ರ್‍ಯಾಂಕ್ ಪಡೆದಿದ್ದಾರೆ.

ಜವಳಿ ವಿಭಾಗದಲ್ಲಿ ಜಮೀರ್ ಅಸ್ಲಾಂ ಬಾರ್ಗೀರ್ ಮತ್ತು ಎಂ.ಟೆಕ್. ಪರಿಸರ ತಂತ್ರಜ್ಞಾನ ವಿಭಾಗದಲ್ಲಿ ವಿಶ್ವವಿದ್ಯಾಲಯದ ಬಂಗಾರದ ಪದಕಗಳನ್ನು ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದು, ಕಾಲೇಜು ರಾಜ್ಯಕ್ಕೆ 5 ನೇ ಸ್ಥಾನದಲ್ಲಿದೆ ಎಂದು ಅರವಿಂದ್ ಮಾಹಿತಿ ನೀಡಿದರು.

**ಕೊಳಚೆ ನೀರಿನಿಂದ ದ್ರವ ರೂಪದ ನ್ಯಾನೋ ಗೊಬ್ಬರ:** ಬಿಐಇಟಿ ಕಾಲೇಜಿನ ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳು ಕೊಳಚೆ ನೀರನ್ನು ಸಾವಯವ ಲಿಕ್ವಿಡ್ ನ್ಯಾನೋ ಗೊಬ್ಬರವನ್ನಾಗಿ ಪರಿವರ್ತಿಸಲು ಕಡಿಮೆ ವೆಚ್ಚದ ಸಾಧನವನ್ನು ಅಭಿವೃದ್ಧಿಪಡಿಸಿದ್ದಾರೆ. ಇದು ಶುದ್ಧ ಪರಿಸರ ಮತ್ತು ಉತ್ತಮ ಕೃಷಿ ಉತ್ಪನ್ನಗಳನ್ನು ಹೊಂದಿರುವ ಎರಡು ಪ್ರಯೋಜನಗಳನ್ನು ಹೊಂದಿದೆ. ಇದು ನಾಗರಿಕರ ಉತ್ತಮ ಆರೋಗ್ಯಕ್ಕೆ ಕಾರಣವಾಗಿದೆ ಎಂದು ಡಾ. ಅರವಿಂದ್ ವಿದ್ಯಾರ್ಥಿಗಳ ಸಾಧನೆ ತಿಳಿಸಿದರು.

**ಹೈಬ್ರಿಡ್ ವಾಹನಗಳಲ್ಲಿ ಸೌರ ಶಕ್ತಿ ಬಳಕೆ:** ಹೆಚ್ಚುತ್ತಿರುವ ಇಂಧನ ಬೆಲೆ, ವಾಯುಮಾಲಿನ್ಯ, ಇಂಧನ ಉಳಿತಾಯದ ಅಗತ್ಯಗಳಂತಹ ಸಮಸ್ಯೆಗಳಿಗೆ ಸೌರ ಶಕ್ತಿ ಪರಿಹಾರವಾಗಿದೆ. ವಿದ್ಯುತ್ ಚಾಲಿತ ಮತ್ತು ಹೈಬ್ರಿಡ್ ವಾಹನಗಳಲ್ಲಿ ಸೌರಶಕ್ತಿಯ ಬಳಕೆ ಕಾರ್ಯಸಾಧ್ಯವಾದ ವಿಧಾನವಾಗಿದೆ ಎಂದು ಡಾ.ಎ.ಜಿ. ಶಂಕರಮೂರ್ತಿ ತಿಳಿಸಿದರು.

**5 ಕೋಟಿ ರೂ. ವೆಚ್ಚದಲ್ಲಿ ಹೈಟೆಕ್ ಪ್ರಯೋಗಾಲಯ:** ಬಿಐಇಟಿ ಕಾಲೇಜಿನಲ್ಲಿ ಮತ್ತೊಂದು ಹೈಟೆಕ್ ಪ್ರಯೋಗಾಲಯವನ್ನು 5 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದು ಎಂದು ಹೇಳಿದರು.

**ಮಾ. 14 ರಂದು ವಿಶ್ವ ಮಹಿಳಾ ದಿನಾಚರಣೆ:** ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದದಿಂದ ಮಾ. 14 ರಂದು ಬೆಳಿಗ್ಗೆ 10.30 ಕ್ಕೆ ಕಾಲೇಜಿನ ಎಸ್.ಎಸ್. ಎಂ. ಸಾಂಸ್ಕೃತಿಕ ಕೇಂದ್ರದಲ್ಲಿ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಹಿಳಾ ವಿಭಾಗದ ಡೀನ್ ಪ್ರೊ. ಎಂ.ಇ. ಆಶಾಲತಾ ಮಾಹಿತಿ ನೀಡಿದರು.

ಇಸ್ರೋ ವಿಜ್ಞಾನಿ ಡಾ. ಟಿ.ಕೆ. ಅನುರಾಧ, ಬಾಪೂಜಿ ವಿದ್ಯಾಸಂಸ್ಥೆ ಗೌರ್ನಿಂಗ್ ಕೌನ್ಸಿಲ್ ಸದಸ್ಯರಾದ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್, ವಿಟಿಯು ರಿಜಿಸ್ಟ್ರಾರ್ (ಇವ್ಯಾಲ್ಯೂವೇಶನ್) ಡಾ. ಬಿ.ಇ. ರಂಗಸ್ವಾಮಿ ಮತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

# ಬಿಐಇಟಿ ಕಾಲೇಜಿಗೆ 14 ರ್‍ಯಾಂಕ್‌ಗಳು

Nagaravani 13-03-2022

# ಒಂದೇ ವರ್ಷ 480 ಜನರಿಗೆ ಉದ್ಯೋಗ




ದಾವಣಗೆರೆ, ಮಾ.12: ರಾಜ್ಯದ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಒಂದಾದ ದಾವಣಗೆರೆಯ ಬಾಪೂಜಿ ಎಂಜಿನಿಯರಿಂಗ್ ಕಾಲೇಜು 2020–21ನೇ ಸಾಲಿನಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವಿವಿದ್ಯಾನಿಲಯದಿಂದ 14 ರ್‍ಯಾಂಕ್‌ಗಳನ್ನು ಪಡೆದುಕೊಂಡು ಅಪ್ರತಿಮ ಸಾಧನೆ ಮಾಡಿದೆ.

ಕಾಲೇಜಿನ ಡೈರೆಕ್ಟರ್ ವೈ.ವೃಷಬೇಂದ್ರಪ್ಪ ಹಾಗೂ ಪ್ರಾಂಶುಪಾಲ ಡಾ॥ ಹೆಚ್.ಬಿ.ಅರವಿಂದ್ ಸುದ್ದಿಗೋಷ್ಠಿಯಲ್ಲಿಂದು ಈ ವಿಷಯ ತಿಳಿಸಿ ಜವಳಿ ವಿಭಾಗದಲ್ಲಿ ಜಮೀರ್ ಅಸ್ಲಾಂ ರಾಜ್ಯಕ್ಕೇ ಮೊದಲ ಹಾಗೂ ಹತೀಶ್‌ದಾಸ್ 2ನೇ ರ್‍ಯಾಂಕ್ ಪಡೆದಿದ್ದಾರೆ ಎಂದರು.

ಚೈತ್ರಾ ಎಸ್ ಮೂರನೇ, ಪ್ರಮೋದ್, ಅಕ್ಷತಾ, ರಂಜಿತಾ, ಪ್ರಗತಿ ಇವರುಗಳು ಕ್ರಮವಾಗಿ 5,6,7 ಮತ್ತು 10ನೇ ರ್‍ಯಾಂಕ್ ಪಡೆದಿದ್ದಾರೆ ಎಂದು ವಿವರಿಸಿದರು.

ಎಂ.ಟೆಕ್ ಪರಿಸರ ತಂತ್ರಜ್ಞಾನ ವಿಭಾಗದಲ್ಲಿ ಕೆ ಸುಚಿತ್ರಾ ರಾಜ್ಯಕ್ಕೆ ಮೊದಲ ರ್‍ಯಾಂಕ್ ಪಡೆದರೆ, ಮೋಹನ್ ರಾಜ್ ಮತ್ತು ಉಮೇಶ್ ಇವರು 3 ಮತ್ತು 5ನೇ ರ್‍ಯಾಂಕ್ ಪಡೆದಿದ್ದಾರೆ. ಎಂ.ಟೆಕ್ ಸ್ಟ್ರಕ್ಚರ್‌ನಲ್ಲಿ ಭೂಮಿಕಾ ಹಾಗೂ ಮಹಮ್ಮದ್ ಮನ್ನಾನ್ ಕ್ರಮವಾಗಿ 6 ಮತ್ತು 10ನೇ ರ್‍ಯಾಂಕ್ ಪಡೆದಿದ್ದಾರೆ. ಎಂಬಿಎ ನಲ್ಲಿ ಸ್ವಾತಿ ಆರ್‌ಕೆ 9ನೇ ರ್‍ಯಾಂಕ್ ಪಡೆದಿದ್ದಾರೆ ಎಂದರು.

ಜಮೀರ್ ಹಾಗೂ ಸುಚಿತ್ರಾ ಅವರುಗಳು ಬಂಗಾರದ ಪದಕಗಳನ್ನು ಪಡೆದು ಬಿಐಇಟಿಗೆ ಹೆಮ್ಮೆಯ ಕೊಡುಗೆ ನೀಡಿದ್ದಾರೆಂದರು.

ಈ ಸಾಲಿನಲ್ಲಿ ಕಾಲೇಜಿನ ವಿವಿಧ ವಿಭಾಗಗಳ 480ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಕಂಪನಿಗಳಲ್ಲಿ ಕೆಲಸ ಗಿಟ್ಟಿಸಿಕೊಂಡಿದ್ದಾರೆ. 12 ಲಕ್ಷದಿಂದ 40 ಲಕ್ಷದವರೆಗೂ ಪ್ಯಾಕೇಜ್ ದೊರೆತಿದೆ ಎಂದರು.

ಕಾಲೇಜಿನ ಸಂಶೋಧನೆಗಳು, ಹೊಸ ಆವಿಷ್ಕಾರಗಳ ಬಗ್ಗೆ ಡಾ॥ ನಿರ್ಮಲ, ಡಾ॥ ಆಶಾಲತ, ಡಾ॥ ಜಿಪಿ ದೇಸಾಯಿ ಮಾಹಿತಿ ನೀಡಿದರು.

ಕೇವಲ ಬೆಂಗಳೂರು ಕಾಲೇಜುಗಳೇ ಶ್ರೇಷ್ಠ, ಅಲ್ಲಿ ಸೇರಿದರೆ ಉದ್ಯೋಗ ಗ್ಯಾರಂಟಿ ಎಂಬುದನ್ನು ನಮ್ಮ ಕಾಲೇಜು ಸುಳ್ಳು ಮಾಡಿದೆ. ಉದ್ಯೋಗ ದೊರಕಿಸುವಲ್ಲಿ ಹೆಚ್ಚು ಸಾಧನೆ ಮಾಡಿದೆ ಎಂದು ವೃಷಬೇಂದ್ರಪ್ಪ ತಿಳಿಸಿದರು.

## ಇಂದಿನಿಂದ ಅಣಬೇರು ಗ್ರಾಮದಲ್ಲಿ ಶ್ರೀ ಮಾರಿಕಾಂಬ ಜಾತ್ರೆ

ದಾವಣಗೆರೆ,ಮಾ.9 : ತಾಲ್ಲೂಕಿನ ಅಣಬೇರು ಗ್ರಾಮದ ಶ್ರೀ ಮಾರಿಕಾಂಬ ದೇವಿಯ ಜಾತ್ರೆಯು ಮಾ.13 ರಿಂದ 16 ವರೆಗೆ ನಡೆಯಲಿದೆ.

ಮಾ.13 ರಂದು ಜಾತ್ರೆಯ ಪ್ರಯುಕ್ತ ಸಾರು ಹಾಕಲಾಗುತ್ತದೆ. ಮಾ.15 ರಂದು ಬೆಳಗ್ಗೆ 9 ಗಂಟೆಗೆ ದೇವಿಗೆ ಉಡಿ ತುಂಬುವುದು, ರಾತ್ರಿ 10–30 ರಿಂದ ಗ್ರಾಮದ ಪ್ರಮುಖ ರಸ್ತೆಯಲ್ಲಿ ಸಕಲ ವಾದ್ಯ ವೃಂದ ಮತ್ತು ಭಾವ ಭವಂತ್ರಿಗಳೊಂದಿಗೆ ಶ್ರೀ ದೇವಿಯ ಮೆರವಣಿಗೆ ನಡೆಯುವುದು. (4ನೇ ಪುಟಕ್ಕೆ)

### ವಿಟಿಯು ವ್ಯಾಪ್ತಿಯಲ್ಲಿ 5ನೇ ಸ್ಥಾನ | ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ ಹೇಳಿಕೆ

# ಬಿಐಇಟಿ ಕಾಲೇಜಿಗೆ 14 ರ‍್ಯಾಂಕುಗಳ ಗರಿ

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

Vijayavani 13-03-2022

ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 2020-21ನೇ ಸಾಲಿನ ಪರೀಕ್ಷೆಗಳಲ್ಲಿ 14 ರ‍್ಯಾಂಕುಗಳನ್ನು ಪಡೆದಿದ್ದು, ರ‍್ಯಾಂಕ್ ಗಳಿಕೆಯಲ್ಲಿ ವಿವಿಗೆ 5ನೇ ಸ್ಥಾನದಲ್ಲಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ ಹೇಳಿದರು.



ಡಾ.ಅರವಿಂದ

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜವಳಿ ವಿಭಾಗದಲ್ಲಿ ಜಮೀರ್ ಅಸ್ಲಾಮ್ ಬಾಗ್ಗಿರ್ ಪ್ರಥಮ, ಹಿತೇಶ್‌ದಾಸ್ ಎರಡನೇ ರ‍್ಯಾಂಕ್ ಪಡೆದಿದ್ದಾರೆ. ಎಶ್ರಾಜ್ ಪಾಟೀಲ್ (ಕೆಮಿಕಲ್ ಇಂಜಿನಿಯರಿಂಗ್), ಎಸ್. ಚೈತ್ರಾ (ಜವಳಿ) ಮೂರನೇ ರ‍್ಯಾಂಕ್ ಗಳಿಸಿದ್ದಾರೆ ಎಂದು ತಿಳಿಸಿದರು.

ಪಿ. ಪ್ರಮೋದ್, ಎನ್.ಬಿ. ಅಕ್ಷತಾ, ಎಚ್.ಕೆ. ರಂಜಿತಾ, ಜಿ. ಪ್ರಗತಿ ಇವರು ಕ್ರಮವಾಗಿ 5,6,7 ಮತ್ತು 10ನೇ ರ‍್ಯಾಂಕುಗಳನ್ನು ಜವಳಿ ವಿಭಾಗದಲ್ಲಿ ಪಡೆದಿದ್ದಾರೆ ಎಂದು ಮಾಹಿತಿ ನೀಡಿದರು. ಎಂ.ಟೆಕ್ ಪರಿಸರ ತಂತ್ರಜ್ಞಾನ ವಿಭಾಗದಲ್ಲಿ ಕೆ. ಸುಚಿತ್ರಾ ಮೊದಲ ರ‍್ಯಾಂಕ್, ಬಿ. ಮೋಹನ್‌ರಾಜ್ ಎಚ್.ಎಲ್. ಉಮೇಶ್ 3 ಮತ್ತು 5 ನೇ ರ‍್ಯಾಂಕ್ ಪಡೆದಿದ್ದಾರೆ. ಕೆ.ವಿ. ಭೂಮಿಕಾ ಮತ್ತು ಮಹಮ್ಮದ್ ಮನ್ನಾನ್ ಕ್ರಮವಾಗಿ 6 ಮತ್ತು 10ನೇ ರ‍್ಯಾಂಕುಗಳನ್ನು ಎಂ.ಟೆಕ್‌ಸ್ಟ್ರಕ್ಚರ್ ವಿಭಾಗದಲ್ಲಿ, ಆರ್. ಕೆ. ಸ್ವಾತಿ ಎಂ.ಬಿ.ಎ ನಲ್ಲಿ 9 ನೇ ರ‍್ಯಾಂಕ್ ಮುಡಿಗೇರಿಸಿಕೊಂಡಿದ್ದಾರೆ. ಇಬ್ಬರು ವಿದ್ಯಾರ್ಥಿಗಳು ಚಿನ್ನದ ಪದಕ ಪಡೆದಿದ್ದಾರೆ ಎಂದರು. ಕಾಲೇಜಿಗೆ ಸಿವಿಲ್, ಮೆಕ್ಯಾನಿಕಲ್, ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಶನ್ ಇಂಜಿನಿಯರಿಂಗ್‌ನಲ್ಲಿ ಎನ್.ಬಿ.ಎ ಮಾನ್ಯತೆ ಸಿಕ್ಕಿದೆ ಎಂದು ತಿಳಿಸಿದರು.

> ಕಾಲೇಜಿನಲ್ಲಿ ಸ್ಟಾರ್ಟಪ್ ಆರಂಭಿಸಲಾಗಿದೆ. ವಿದ್ಯಾರ್ಥಿಗಳಲ್ಲಿ ಆವಿಷ್ಕಾರ ಮನೋಭಾವ ಬೆಳೆಸುವ ಉದ್ದೇಶದಿಂದ ಇನ್ನೋವೇಶನ್ ಕ್ಲಬ್ ಇದೆ. ಗುಣಮಟ್ಟದ ಶಿಕ್ಷಣವನ್ನು ನೀಡಲಾಗುತ್ತಿದ್ದು, ವಿದ್ಯಾರ್ಥಿಗಳು ದೂರದ ಬೆಂಗಳೂರಿನಂಥ ನಗರಗಳಿಗೆ ತೆರಳುವ ಅಗತ್ಯವಿಲ್ಲ.
>
> | ಪ್ರೊ.ವೈ. ವೃಷಭೇಂದ್ರಪ್ಪ ಬಿಐಇಟಿ ನಿರ್ದೇಶಕ

ಉದ್ಯೋಗ ವಿಭಾಗದ ಡೀನ್ ಡಾ. ನಿರ್ಮಲಾ ಮಾತನಾಡಿ, 7 ನೇ ಸೆಮಿಸ್ಟರ್‌ನ 500 ವಿದ್ಯಾರ್ಥಿಗಳಿಗೆ ವಿವಿಧ ಕಂಪನಿಗಳಲ್ಲಿ ನೇಮಕಾತಿಯಾಗಿದ್ದು, ವಾರ್ಷಿಕ 6 ಲಕ್ಷದಿಂದ 35 ಲಕ್ಷ ರೂ. ವರೆಗೆ ಅವರ ವೇತನ ನಿಗದಿಯಾಗಿದೆ. ಏಪ್ರಿಲ್‌ನಲ್ಲಿ 2ನೇ ಹಂತದ ಕ್ಯಾಂಪಸ್ ಸಂದರ್ಶನ ನಡೆಯಲಿದೆ ಎಂದು ಹೇಳಿದರು.

ಹೈಬ್ರೀಡ್ ಇ-ವಾಹನ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಡೀನ್ ಡಾ. ಶಂಕರಮೂರ್ತಿ ತಿಳಿಸಿದರು. ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳು ಕೊಳಚೆ ನೀರನ್ನು ಸಾವಯವ ಲಿಕ್ವಿಡ್ ನ್ಯಾನೊ ಗೊಬ್ಬರವನ್ನಾಗಿ ಪರಿವರ್ತಿಸಲು ಕಡಿಮೆ ವೆಚ್ಚದ ಸಾಧನವನ್ನು ಅಭಿವೃದ್ಧಿಪಡಿಸಿದ್ದಾರೆ ಎಂದು ಪ್ರಾಧ್ಯಾಪಕ ಡಾ. ಶರಣ್ ತಿಳಿಸಿದರು. ಡಾ.ಜಿ.ಪಿ.ದೇಸಾಯಿ ಇದ್ದರು.

## ಮಹಿಳಾ ದಿನಾಚರಣೆ

ಕಾಲೇಜಿನ ಎಸ್ಎಸ್ಎಂ ಸಾಂಸ್ಕೃತಿಕ ಕೇಂದ್ರದಲ್ಲಿ ಮಾ. 14 ರಂದು ಅಂತಾರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಗುವುದು ಎಂದು, ಮಹಿಳಾ ಕೋಶದ ಡೀನ್ ಪ್ರೊ.ಎಂ.ಇ. ಆಶಾಲತಾ ತಿಳಿಸಿದರು. ಅಂದು ಬೆಳಗ್ಗೆ 10.30 ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಇಸ್ರೋ ವಿಜ್ಞಾನಿ ಡಾ. ಟಿ.ಕೆ. ಅನುರಾಧಾ, ಬಾಪೂಜಿ ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯೆ ಡಾ. ಪ್ರಭಾ ಮಲ್ಲಿಕಾರ್ಜುನ, ವಿ.ಟಿ.ಯು. ಕುಲಸಚಿವ (ಮೌಲ್ಯಮಾಪನ) ಡಾ.ಬಿ.ಇ. ರಂಗಸ್ವಾಮಿ ಭಾಗವಹಿಸುವರು ಎಂದರು.




ಪಟ್ಟಣ ಪಂಚಾಯಿತಿ ಕಾರ್ಯಾಲಯ

ನಾಯಕನಹಟ್ಟಿ–577 536.

ಫೋನ್ ನಂ. 08190–207095 E-Mail : tpnayakanahatti@yahoo.com

ನಂ:ಪಪಂನಾಹ/ಕಂಶಾ/ಸಿಆರ್‌ಸಂಖ್ಯೆ : /2021–22 ದಿನಾಂಕ : 08–03–2022

ಪತ್ರಿಕಾ ಪ್ರಕಟಣೆ

ದಿನಾಂಕ 15–03–2022ರಂದು ಚಳ್ಳಕೆರೆ ತಾಲ್ಲೂಕು, ನಾಯಕನಹಟ್ಟಿ ಪಟ್ಟಣ ಪಂಚಾಯಿತಿ ಆವರಣದಲ್ಲಿ ಮಾನ್ಯ ತಹಶೀಲ್ದಾರರು, ಚಳ್ಳಕೆರೆ ಹಾಗೂ ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯಿತಿ, ನಾಯಕನಹಟ್ಟಿ ಇವರ ಸಮ್ಮುಖದಲ್ಲಿ ದಿನಾಂಕ 20–03–2022ರಿಂದ ದಿನಾಂಕ 28–03–2022ರವರೆಗೆ ಶ್ರೀ ಗುರುತಿಪ್ಪೇರುದ್ರಸ್ವಾಮಿ ಜಾತ್ರೆಗೆ ಬರುವ ಅಂಗಡಿಗಳ ನೆಲವಳಿ ಸುಂಕ ವಸೂಲು ಮಾಡುವ ಹಕ್ಕುಗಳನ್ನು ಹರಾಜಿನ ಮೂಲಕ ವಿಲೇ ಪಡಿಸಲಾಗುವುದು. ಡಿಪಾಜಿಟ್‌ಗಳ ಡಿಡಿಗಳನ್ನು ದಿನಾಂಕ 14–03–2022ರಂದು ಕಛೇರಿ ಅವಧಿಯೊಳಗೆ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿಯ ಕಂದಾಯ ಶಾಖೆ ಹಾಗೂ ಕಛೇರಿ ವೆಬ್‌ಸೈಟ್ ವೀಕ್ಷಿಸಬಹುದಾಗಿದೆ. (www.nayakanahattitow.mrc.gov.in)

| ಸಹಿ/– | ಸಹಿ/– |
|---|---|
| (ಶ್ರೀ ಎನ್.ರಘುಮೂರ್ತಿ) ಕೆ.ಎ.ಎಸ್. | (ಶ್ರೀ ಎನ್.ಟಿ. ಕೋಡಿಭೀಮರಾಯ) |
| ತಹಶೀಲ್ದಾರರು, ಚಳ್ಳಕೆರೆ ಹಾಗೂ | ಮುಖ್ಯಾಧಿಕಾರಿ |
| ಆಡಳಿತಾಧಿಕಾರಿಗಳು, | ಪಟ್ಟಣ ಪಂಚಾಯಿತಿ, |
| ಪಟ್ಟಣ ಪಂಚಾಯಿತಿ, ನಾಯಕನಹಟ್ಟಿ | ನಾಯಕನಹಟ್ಟಿ |



# ಬಿಐಇಟಿಗೆ 14 ರ್‍ಯಾಂಕ್: ಎರಡು ಚಿನ್ನದ ಪದಕ

ಪ್ರಜಾವಾಣಿ ವಾರ್ತೆ 13-03-2022

ದಾವಣಗೆರೆ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 2020-21ನೇ ಸಾಲಿನ ಪರೀಕ್ಷೆಯಲ್ಲಿ ಇಲ್ಲಿನ ಬಿಐಇಟಿ ಕಾಲೇಜಿಗೆ 14 ರ್‍ಯಾಂಕ್‌ಗಳು ಬಂದಿವೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ ತಿಳಿಸಿದರು.

ವಿಟಿಯು ನಡೆಸಿದ ಪರೀಕ್ಷೆಯಲ್ಲಿ ಬಿಐಇಟಿ 5ನೇ ಸ್ಥಾನದಲ್ಲಿದ್ದು, ಜವಳಿ ವಿಭಾಗದಲ್ಲಿ ಜಮೀರ್ ಅಸ್ಲಾಮ್ ಬಾಗ್ಗಿರ್ ಹಾಗೂ ಎಂ.ಟೆಕ್. ಪರಿಸರ ತಂತ್ರಜ್ಞಾನ ವಿಭಾಗದಲ್ಲಿ ಕೆ.ಸುಚಿತ್ರಾ ಅವರು ಬಂಗಾರದ ಪದಕಗಳನ್ನು ಪಡೆದಿದ್ದಾರೆ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಜವಳಿ ವಿಭಾಗದಲ್ಲಿ ಹಿತೇಶ್ ದಾಸ್ ಎರಡನೇ ರ್‍ಯಾಂಕ್ ಪಡೆದಿದ್ದಾರೆ. ಎಶ್ರಾಜ್ ಪಾಟೀಲ್ ಅವರು ಕೆಮಿಕಲ್ ಎಂಜಿನಿಯರಿಂಗ್‌ನಲ್ಲಿ, ಚೈತ್ರಾ ಎಸ್. ಅವರು ಜವಳಿ ವಿಭಾಗದಲ್ಲಿ ಮೂರನೇ ರ್‍ಯಾಂಕ್ ಪಡೆದಿದ್ದಾರೆ. ಪ್ರಮೋದ್ ಪಿ., ಅಕ್ಷತಾ ಎನ್.ಬಿ., ರಂಜಿತಾ ಎಚ್.ಕೆ. ಮತ್ತು ಪ್ರಗತಿ ಜಿ. ಅವರು ಕ್ರಮವಾಗಿ 5, 6, 7 ಮತ್ತು 10ನೇ ರ್‍ಯಾಂಕ್‌ಗಳನ್ನು ಜವಳಿ ವಿಭಾಗದಲ್ಲಿ ಪಡೆದಿದ್ದಾರೆ’ ಎಂದು ಮಾಹಿತಿ ನೀಡಿದರು.

ಎಂ.ಟೆಕ್ ಪರಿಸರ ತಂತ್ರಜ್ಞಾನ ವಿಭಾಗದಲ್ಲಿ ಮೋಹನ್ ರಾಜ್ ಬಿ. ಮತ್ತು ಉಮೇಶ್ ಎಚ್.ಎಲ್. ಅವರು 3 ಮತ್ತು 5ನೇ ರ್‍ಯಾಂಕ್ ಗಳಿಸಿದ್ದಾರೆ. ಎಂ.ಟೆಕ್. ಸ್ಟ್ರಕ್ಚರ್ ವಿಭಾಗದಲ್ಲಿ ಭೂಮಿಕಾ ಕೆ.ವಿ. ಮತ್ತು ಮುಹಮ್ಮದ್ ಮನ್ನಾನ್ ಅವರು ಕ್ರಮವಾಗಿ 6 ಮತ್ತು 10ನೇ ರ್‍ಯಾಂಕ್ ಮತ್ತು ಪಡೆದಿದ್ದಾರೆ. ಎಂ.ಬಿ.ಎನಲ್ಲಿ ಸ್ವಾತಿ ಆರ್.ಕೆ. 9ನೇ ರ್‍ಯಾಂಕ್ ಪಡೆದಿದ್ದಾರೆ ಎಂದರು.

‘ಬಾಪೂಜಿ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಶಾಮನೂರು ಶಿವಶಂಕರಪ್ಪ, ಜಂಟಿ ಕಾರ್ಯದರ್ಶಿ ಎಸ್.ಎಸ್. ಮಲ್ಲಿಕಾರ್ಜುನ ಅವರು ಮತ್ತು ಅಧ್ಯಕ್ಷರಾದ ರಾಜನಹಳ್ಳಿ ರಮಾನಂದ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ’ ಎಂದರು.

ಉದ್ಯೋಗ ವಿಭಾಗದ ಡೀನ್ ಡಾ. ನಿರ್ಮಲಾ ಮಾತನಾಡಿ, ‘7ನೇ ಸೆಮಿಸ್ಟರ್‌ನ 500 ವಿದ್ಯಾರ್ಥಿಗಳಿಗೆ ವಿವಿಧ ಕಂಪನಿಗಳಲ್ಲಿ ನೇಮಕಾತಿಯಾಗಿದ್ದು, ವಾರ್ಷಿಕ ₹ 6 ಲಕ್ಷದಿಂದ ₹ 35 ಲಕ್ಷದವರೆಗೆ ಅವರ ವೇತನ ನಿಗದಿಯಾಗಿದೆ. ಏಪ್ರಿಲ್‌ನಲ್ಲಿ 2ನೇ ಹಂತದ ಕ್ಯಾಂಪಸ್ ಸಂದರ್ಶನ ನಡೆಯಲಿದೆ’ ಎಂದು ಹೇಳಿದರು.

ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಡೀನ್ ಡಾ. ಶಂಕರಮೂರ್ತಿ ಮಾತನಾಡಿ, ‘ಬಿಐಇಟಿ ರೋವ್ ಲ್ಯಾಬ್ಸ್ ಸಹಯೋಗದೊಂದಿಗೆ ಹೈಬ್ರೀಡ್ ಇ-ವಾಹನ ಅಭಿವೃದ್ಧಿಪಡಿಸುತ್ತಿದ್ದು, ಪೆಟ್ರೋಲ್ ಬೆಲೆ ಏರಿಕೆಯಾಗಿರುವ ಇಂದಿನ ದಿನಗಳಲ್ಲಿ ಸೋಲಾರ್‌ನಿಂದಲೇ ವಾಹನ ಚಾಲನೆ ಮಾಡುವ ವಿಧಾನ ಇದಾಗಿದೆ’ ಎಂದು ಹೇಳಿದರು.

‘ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳು ಕೊಳಚೆ ನೀರನ್ನು ಸಾವಯವ ಲಿಕ್ವಿಡ್ ನ್ಯಾನೊ ಗೊಬ್ಬರವನ್ನಾಗಿ ಪರಿವರ್ತಿಸಲು ಕಡಿಮೆ ವೆಚ್ಚದ ಸಾಧನವನ್ನು ಅಭಿವೃದ್ಧಿಪಡಿಸಿದ್ದಾರೆ’ ಎಂದು ಪ್ರಾಧ್ಯಾಪಕ ಡಾ. ಶರಣ್ ತಿಳಿಸಿದರು.

ಕಾಲೇಜಿನ ಸಾರ್ವಜನಿಕ ಸಂಪರ್ಕ ಡೀನ್ ಡಾ.ಜಿ.ಪಿ. ದೇಸಾಯಿ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

## ನಾಳೆ ಮಹಿಳಾ ದಿನಾಚರಣೆ

ಬಿಐಇಟಿಯಿಂದ ಮಾರ್ಚ್ 14ರಂದು ಮಹಿಳಾ ದಿನಾಚರಣೆಯನ್ನು ಕಾಲೇಜಿನ ಎಸ್.ಎಸ್.ಸಾಂಸ್ಕೃತಿಕ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಮಹಿಳಾ ಘಟಕದ ಅಧ್ಯಕ್ಷೆ ಪ್ರೊ.ಆಶಾಲತಾ ಎಂ.ಇ. ತಿಳಿಸಿದರು.

ಇಸ್ರೊ ವಿಜ್ಞಾನಿ ಡಾ.ಅನುರಾಧ ಟಿ.ಕೆ., ಮುಖ್ಯಅತಿಥಿಗಳಾಗಿ ಭಾಗವಹಿಸಲಿದ್ದು, ಬಿಇಎ ಆಡಳಿತ ಮಂಡಳಿಯ ಸದಸ್ಯೆ ಡಾ.ಪ್ರಭಾ ಮಲ್ಲಿಕಾರ್ಜುನ್ ಹಾಗೂ ಬೆಳಗಾವಿಯ ವಿಟಿಯು ರಿಜಿಸ್ಟ್ರಾರ್ ಡಾ.ರಂಗಸ್ವಾಮಿ ಬಿ.ಇ. ಗೌರವ ಅತಿಥಿಗಳಾಗಿ ಪಾಲ್ಗೊಳ್ಳುವರು. ಅಂದು ಅಧ್ಯಾಪಕರಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

‘ಸುಸ್ಥಿರ ನಾಳೆಗಾಗಿ ಇಂದು ಲಿಂಗ ಸಮಾನತೆ’ ಕುರಿತು ಚರ್ಚಿಸಲಾಗುವುದು ಎಂದರು.

## ಸ್ಟಾರ್ಟ್ ಅಪ್ ಆರಂಭ

ಕಾಲೇಜಿನ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ ಮಾತನಾಡಿ, ‘ವಿದ್ಯಾರ್ಥಿಗಳಿಗೆ ಉದ್ಯೋಗಕ್ಕೆ ನೆರವಾಗುವ ನಿಟ್ಟಿನಲ್ಲಿ ಸ್ಟಾರ್ಟ್ ಅಪ್ ಆರಂಭಿಸಿದ್ದೇವೆ. 10 ವಿದ್ಯಾರ್ಥಿಗಳಿಗೆ ಅಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗುವುದು. ವಿದ್ಯಾರ್ಥಿ ಹಂತದಲ್ಲೇ ಹೊಸ ಆವಿಷ್ಕಾರಕ್ಕೆ ಪೂರಕ ವಾತಾವರಣ ನಿರ್ಮಿಸಿದ್ದೇವೆ’ ಎಂದರು.

# ಸೌರಶಕ್ತಿಯಿಂದ ಇ-ವಾಹನ ತಯಾರಿಗೆ ಸಂಶೋಧನೆ

Udayavani 13-03-2022




ದಾವಣಗೆರೆ: ಬಿಐಇಟಿ ಕಾಲೇಜಿನ ಪ್ರಾಂಶುಪಾಲ ಡಾ। ಎಚ್.ಬಿ. ಅರವಿಂದ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ದಾವಣಗೆರೆ: ಯಾವುದೇ ಅಡೆತಡೆ ಇಲ್ಲದೆ ನಿರಂತರ ಇ-ವಾಹನ ಚಲಾಯಿಸಲು ಸಾಧ್ಯವಾಗಬಹುದಾದ ಹೈಬ್ರಿಡ್ ಸೌರಶಕ್ತಿ ಅಭಿವೃದ್ಧಿಪಡಿಸುವ ಪರಿಕಲ್ಪನೆಯ ಪಿವಿ-ಸೆಲ್ ಮತ್ತು ಡಿಎಸ್ಎಸ್ ಸಿ ಸಂಯೋಜನೆಯ ಸಂಶೋಧನೆ ನಗರದ ಬಾಪೂಜಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ। ಎಚ್.ಬಿ. ಅರವಿಂದ್ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನ ರೋವ್ ಲ್ಯಾಬ್ಸ್ ಪ್ರೈ ಲಿಮಿಟೆಡ್ ಸಹಯೋಗದಲ್ಲಿ ಕಾಲೇಜಿನಲ್ಲಿ ಸಾಕಷ್ಟು ಸಂಶೋಧನಾ ಯೋಜನೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಹೆಚ್ಚುತ್ತಿರುವ ಇಂಧನ ಬೆಲೆಗಳು, ವಾಯುಮಾಲಿನ್ಯ ತಡೆ, ಇಂಧನ ಉಳಿತಾಯದ ಅಗತ್ಯದ ಹಿನ್ನೆಲೆಯಲ್ಲಿ ಸೌರಶಕ್ತಿ ಪರಿಹಾರವಾಗಿದೆ. ವಿದ್ಯುತ್ ಚಾಲಿತ, ಹೈಬ್ರಿಡ್ ವಾಹನಗಳಲ್ಲಿ ಸೌರಶಕ್ತಿ ಬಳಕೆ ಕಾರ್ಯ ಸಾಧ್ಯ. ಅದೇ ರೀತಿ ಕೊಳಚೆ ನೀರಿನಿಂದ ದ್ರವರೂಪದ ನ್ಯಾನೋ ಗೊಬ್ಬರ ತಯಾರಿಸುವ ನಿಟ್ಟಿನಲ್ಲಿ ತಮ್ಮ ಕಾಲೇಜು ವಿದ್ಯಾರ್ಥಿಗಳು ಬೋಧಕರ ಮಾರ್ಗದರ್ಶನ ದಲ್ಲಿ ಮುಂದಾಗಿದ್ದಾರೆ. ರಾಜ್ಯದ ಪ್ರತಿಷ್ಠಿತ ಎಂಜಿನಿಯರಿಂಗ್ ಕಾಲೇಜುಗಳಲ್ಲೊಂದಾದ ಬಿಐಇಟಿಯಲ್ಲಿ ಸುಮಾರು 25 ಸಾವಿರ ವಿದ್ಯಾರ್ಥಿಗಳು ಓದಿದ್ದು 8ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ವಿಶ್ವದ ವಿವಿಧೆಡೆ ಪ್ರತಿಷ್ಠಿತ ಕಂಪನಿಗಳಲ್ಲಿ, ಸ್ವಂತ ಕಂಪನಿಗಳನ್ನು ಸ್ಥಾಪಿಸಿಕೊಂಡು ಸಾಧನೆ ಮಾಡುತ್ತಿದ್ದಾರೆ ಎಂದರು.

ಪ್ರಾಧ್ಯಾಪಕಿ ಡಾ। ಆಶಾಲತಾ ಮಾತನಾಡಿ, ಮಾ. 14ರಂದು ಬೆಳಗ್ಗೆ 10:30ಕ್ಕೆ ಕಾಲೇಜಿನ ಎಸ್ಸೆಸ್ಸೆಂ ಸಾಂಸ್ಕೃತಿಕ ಸಭಾಂಗಣದಲ್ಲಿ ವಿಶ್ವ ಮಹಿಳಾ ದಿನಾಚರಣೆ ಹಮ್ಮಿಕೊಂಡಿದ್ದೇವೆ. ಡಾ। ಪ್ರಭಾ ಮಲ್ಲಿಕಾರ್ಜುನ, ಡಾ। ಟಿ.ಕೆ. ಅನುರಾಧ, ಡಾ। ಬಿ.ಇ. ರಂಗಸ್ವಾಮಿ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಕಾಲೇಜು ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ, ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ ಇತರರು ಪಾಲ್ಗೊಳ್ಳುವರು ಎಂದು ತಿಳಿಸಿದರು. ಕಾಲೇಜಿನ ಬೋಧಕ ಸಾರ್ವಜನಿಕ ಸಂಪರ್ಕ ಡೀನ್ ಡಾ। ಈ.ಪಿ. ದೇಸಾಯಿ, ಡಾ। ಶಂಕರಮೂರ್ತಿ, ಡಾ। ನಿರ್ಮಲ, ಡಾ। ಶರಣ್ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

## ಬಾಪೂಜಿ ಎಂಜಿನಿಯರಿಂಗ್ ಕಾಲೇಜಿಗೆ 14 ರ್‍ಯಾಂಕ್

ದಾವಣಗೆರೆ: ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾನಿಲಯದ 2020-21ನೇ ವರ್ಷದ ಪರೀಕ್ಷೆಗಳಲ್ಲಿ ನಗರದ ಬಾಪೂಜಿ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರು 14 ರ್‍ಯಾಂಕ್ ಗಳಿಸುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ। ಎಚ್.ಬಿ. ಅರವಿಂದ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಲೇಜಿನ ಜವಳಿ ವಿಭಾಗದ ಜಮೀರ್ ಅಸ್ಲಾಂ ಬಾರ್‍ಗಿರ್ 1ನೇ ರ್‍ಯಾಂಕ್, ಹಿತೇಶ್ ದಾಸ್ 2ನೇ ರ್‍ಯಾಂಕ್, ಎಶ್ರಾಜ್ ಪಾಟೀಲ್ ಕೆಮಿಕಲ್ ಎಂಜಿನಿಯರಿಂಗ್ ನಲ್ಲಿ , ಎಸ್. ಚೈತ್ರಾ ಜವಳಿ ವಿಭಾಗದಲ್ಲಿ 3ನೇ ರ್‍ಯಾಂಕ್ ಪಡೆದಿದ್ದಾರೆ. ಪಿ. ಪ್ರಮೋದ್, ಎನ್.ಬಿ. ಅಕ್ಷತಾ, ಎಚ್.ಕೆ. ರಂಜಿತಾ, ಜಿ. ಪ್ರಗತಿ ಕ್ರಮವಾಗಿ 5, 6, 7 ಹಾಗೂ 10ನೇ ರ್‍ಯಾಂಕ್ ಪಡೆದಿದ್ದಾರೆ. ಎಂ.ಟೆಕ್ ಪರಿಸರ ತಂತ್ರಜ್ಞಾನ ವಿಭಾಗದಲ್ಲಿ ಕೆ. ಸುಚಿತ್ರಾ 1ನೇ ರ್‍ಯಾಂಕ್, ಬಿ. ಮೋಹನರಾಜ, ಎಚ್. ಎಲ್. ಉಮೇಶ ಕ್ರಮವಾಗಿ 3, 5ನೇ ರ್‍ಯಾಂಕ್, ಎಂ.ಟೆಕ್ ಸ್ಟ್ರಕ್ಚರ್ ವಿಭಾಗದಲ್ಲಿ ಕೆ.ವಿ. ಭೂಮಿಕಾ, ಮಹಮ್ಮದ್ ಮನ್ನಾನ್ ಕ್ರಮವಾಗಿ 6, 10ನೇ ರ್‍ಯಾಂಕ್ ಪಡೆದಿದ್ದಾರೆ. ಎಂಬಿಎನಲ್ಲಿ ಆರ್.ಕೆ. ಸ್ವಾತಿ 9ನೇ ರ್‍ಯಾಂಕ್ ಪಡೆದಿದ್ದಾರೆ. ಜಮೀರ್ ಅಸ್ಲಾಂ ಬಾರ್‍ಗಿರ್ ಜವಳಿ ವಿಭಾಗದಲ್ಲಿ, ಕೆ. ಸುಚಿತ್ರಾ ಎಂ.ಟೆಕ್ ಪರಿಸರ ತಂತ್ರಜ್ಞಾನ ವಿಭಾಗದಲ್ಲಿ ವಿಟಿಯು ಚಿನ್ನದ ಪದಕ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ ಎಂದರು.

ಬಾಪೂಜಿ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ। ಶಾಮನೂರು ಶಿವಶಂಕರಪ್ಪ, ಜಂಟಿ ಕಾರ್ಯದರ್ಶಿ ಎಸ್.ಎಸ್. ಮಲ್ಲಿಕಾರ್ಜುನ, ಅಧ್ಯಕ್ಷ ರಾಜನಹಳ್ಳಿ ರಮಾನಂದ, ಬಿಇಐಟಿ ಕಾಲೇಜು ನಿರ್ದೇಶಕ ಪ್ರೊ। ವೈ. ವೃಷಭೇಂದ್ರಪ್ಪ, ಪ್ರಾಚಾರ್ಯ ಡಾ। ಎಚ್.ಬಿ. ಅರವಿಂದ್, ವಿವಿಧ ವಿಭಾಗಗಳ ಮುಖ್ಯಸ್ಥರು, ಡೀನ್‌ಗಳು, ಬೋಧಕರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

# ದಾವಣಗೆರೆ: ಬಿಐಇಟಿಯ ವಿದ್ಯಾರ್ಥಿಗಳಿಗೆ 14 ರ‍್ಯಾಂಕ್

## ಹೊಸ ಸಂಶೋಧನೆಗೆ ಪ್ರೋತ್ಸಾಹ : ಡಾ.ಅರವಿಂದ್




ದಾವಣಗೆರೆಯಲ್ಲಿ ಬಿಐಇಟಿ ಕಾಲೇಜು ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ದಾವಣಗೆರೆ 13-03-2022

ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾನಿಲಯದ 2020-21ನೇ ವರ್ಷದ ಪರೀಕ್ಷೆಗಳಲ್ಲಿ ನಗರದ ಬಿಐಇಟಿ ಕಾಲೇಜಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಒಟ್ಟು 14 ರ‍್ಯಾಂಕ್‌ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ ಎಂದು ಕಾಲೇಜು ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ್, ಕಾಲೇಜು ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಲೇಜಿನ ಜವಳಿ ವಿಭಾಗದ ಜಮೀರ್ ಅಸ್ಲಾಂ ಬಾರ್ಗಿರ್ 1ನೇ ರ‍್ಯಾಂಕ್, ಹಿತೇಶ್ ದಾಸ್ 2ನೇ ರ‍್ಯಾಂಕ್, ಎಶ್ರಾಜ್ ಪಾಟೀಲ್ ಕೆಮಿಕಲ್ ಇಂಜಿನಿಯರಿಂಗ್‌ನಲ್ಲಿ, ಎಸ್.ಚೈತ್ರಾ ಜವಳಿ ವಿಭಾಗದಲ್ಲಿ 3ನೇ ರ‍್ಯಾಂಕ್ ಪಡೆದಿದ್ದಾರೆ ಎಂದರು. ಪಿ.ಪ್ರಮೋದ್, ಎನ್.ಬಿ.ಅಕ್ಷತಾ, ಎಚ್.ಕೆ.ರಂಜಿತಾ, ಜಿ.ಪ್ರಗತಿ ಕ್ರಮವಾಗಿ 5, 6, 7 ಹಾಗೂ 10ನೇ ರ‍್ಯಾಂಕ್ ಪಡೆದಿದ್ದಾರೆ.

ಎಂ.ಟೆಕ್ ಪರಿಸರ ತಂತ್ರಜ್ಞಾನ ವಿಭಾಗದಲ್ಲಿ ಕೆ.ಸುಚಿತ್ರಾ 1ನೇ ರ‍್ಯಾಂಕ್, ಬಿ.ಮೋಹನರಾಜ, ಎಚ್.ಎಲ್.ಉಮೇಶ ಕ್ರಮವಾಗಿ 3, 5ನೇ ರ‍್ಯಾಂಕ್, ಎಂ.ಟೆಕ್.ಸ್ಟ್ರಕ್ಚರ್ ವಿಭಾಗದಲ್ಲಿ ಕೆ.ಪಿ.ಭೂಮಿಕಾ, ಮುಹಮ್ಮದ್ ಮಸ್ನಾನ್ ಕ್ರಮವಾಗಿ 6, 10ನೇ ರ‍್ಯಾಂಕ್ ಪಡೆದಿದ್ದಾರೆ. ಎಂಬಿಎನಲ್ಲಿ ಆರ್.ಕೆ.ಸ್ವಾತಿ 9ನೇ ರ‍್ಯಾಂಕ್ ಪಡೆದಿದ್ದಾರೆ. ಜಮೀರ್ ಅಸ್ಲಾಂ ಬಾರ್ಗಿರ್ ಜವಳಿ ವಿಭಾಗದಲ್ಲಿ, ಕೆ.ಸುಚಿತ್ರಾ ಎಂ.ಟೆಕ್ ಪರಿಸರ ತಂತ್ರಜ್ಞಾನ ವಿಭಾಗದಲ್ಲಿ ವಿಟಿಯು ಚಿನ್ನದ ಪದಕ ಪಡೆದು, ಕಾಲೇಜಿಗೆ ಕೀರ್ತಿ ತಂದಿದ್ದಾರೆ ಎಂದು ಹೇಳಿದರು.

ಬಾಪೂಜಿ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಶಾಮನೂರು ಶಿವಶಂಕರಪ್ಪ, ಜಂಟಿ ಕಾರ್ಯದರ್ಶಿ ಎಸ್.ಎಸ್.ಮಲ್ಲಿಕಾರ್ಜುನ, ಅಧ್ಯಕ್ಷ ರಾಜನಹಳ್ಳಿ ರಮಾನಂದ, ಪ್ರೊ.ವೈ.ವೃಷಭೇಂದ್ರಪ್ಪ, ಡಾ.ಎಚ್.ಬಿ.ಅರವಿಂದ, ವಿವಿಧ ವಿಭಾಗದ ಮುಖ್ಯಸ್ಥರು, ಡೀನ್‌ಗಳು, ಬೋಧಕರು ವಿದ್ಯಾರ್ಥಿಗಳ ಸಾಧನೆಗೆ ಅಭಿನಂದಿಸಿದ್ದಾರೆ.

ಬೆಂಗಳೂರಿನ ರೋವ್ ಲ್ಯಾಬ್ಸ್ ಪ್ರೈ.ಲಿಮಿಟೆಡ್ ಸಹಯೋಗದಲ್ಲಿ ಕಾಲೇಜಿನಲ್ಲಿ ಸಾಕಷ್ಟು ಸಂಶೋಧನಾ ಯೋಜನೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಹೆಚ್ಚುತ್ತಿರುವ ಇಂಧನ ಬೆಲೆ, ವಾಯುಮಾಲಿನ್ಯ ತಡೆ, ಇಂಧನ ಉಳಿತಾಯದ ಅಗತ್ಯದ ಹಿನ್ನೆಲೆಯಲ್ಲಿ ಸೌರಶಕ್ತಿ ಪರಿಹಾರವಾಗಿದೆ ಎಂದು ಮಾಹಿತಿ ನೀಡಿದರು.

ಪ್ರಾಧ್ಯಾಪಕಿ ಡಾ.ಆಶಾಲತಾ ಮಾತನಾಡಿ, ಮಾ.14ರಂದು ಬೆಳಗ್ಗೆ 10.30ಕ್ಕೆ ಕಾಲೇಜಿನಲ್ಲಿ ವಿಶ್ವ ಮಹಿಳಾ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಡಾ.ಪ್ರಭಾ ಮಲ್ಲಿಕಾರ್ಜುನ, ಡಾ.ಟಿ.ಕೆ.ಅನುರಾಧ, ಡಾ.ಬಿ.ಇ.ರಂಗಸ್ವಾಮಿ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಕಾಲೇಜು ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ, ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ ಇತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಕಾಲೇಜಿನ ಬೋಧಕ ಸಾರ್ವಜನಿಕ ಸಂಪರ್ಕ ಡೀನ್ ಡಾ.ಈ.ಪಿ.ದೇಸಾಯಿ, ಡಾ.ಶಂಕರಮೂರ್ತಿ, ಡಾ.ನಿರ್ಮಲ, ಡಾ.ಶರಣ್ ಇತರರಿದ್ದರು.

# ಬಿಐಇಟಿ ಕಾಲೇಜಿಗೆ 14 ರ‍್ಯಾಂಕ್‌ಗಳು

Samyuktha karnataka 13-03-2022

ದಾವಣಗೆರೆ: ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ 2020-21ನೇ ವರ್ಷದ ಪರೀಕ್ಷೆಗಳಲ್ಲಿ ನಗರದ ಬಿಐಇಟಿ ಕಾಲೇಜಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಒಟ್ಟು 14 ರ‍್ಯಾಂಕ್ ಗಳಿಸುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ ಎಂದು ಕಾಲೇಜು ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ, ಕಾಲೇಜು ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಲೇಜಿನ ಜವಳಿ ವಿಭಾಗದ ಜಮೀರ್ ಅಸ್ಲಾಂ ಬಾರ್ಗಿರ್ 1ನೇ ರ‍್ಯಾಂಕ್, ಹಿತೇಶ್ ದಾಸ್ 2ನೇ ರ‍್ಯಾಂಕ್, ಎಶ್ರಾಜ್ ಪಾಟೀಲ್ ಕೆಮಿಕಲ್ ಇಂಜಿನಿಯರಿಂಗ್‌ನಲ್ಲಿ ,ಎಸ್.ಚೈತ್ರಾ ಜವಳಿ ವಿಭಾಗದಲ್ಲಿ 3ನೇ ರ‍್ಯಾಂಕ್ ಪಡೆದಿದ್ದಾರೆ ಎಂದು ತಿಳಿಸಿದರು. ಪಿ.ಪ್ರಮೋದ್, ಎನ್.ಬಿ.ಅಕ್ಷತಾ, ಎಚ್.ಕೆ.ರಂಜಿತಾ, ಜಿ.ಪ್ರಗತಿ ಕ್ರಮವಾಗಿ 5, 6, 7 ಹಾಗೂ 10ನೇ ರ‍್ಯಾಂಕ್ ಪಡೆದಿದ್ದರೆ, ಎಂ.ಟೆಕ್ ಪರಿಸರ ತಂತ್ರಜ್ಞಾನ ವಿಭಾಗದಲ್ಲಿ ಕೆ.ಸುಚಿತ್ರಾ 1ನೇ ರ‍್ಯಾಂಕ್, ಬಿ.ಮೋಹನರಾಜ, ಎಚ್.ಎಲ್.ಉಮೇಶ ಕ್ರಮವಾಗಿ 3, 5ನೇ ರ‍್ಯಾಂಕ್, ಎಂ.ಟೆಕ್.ಸ್ಟ್ರಕ್ಚರ್ ವಿಭಾಗದಲ್ಲಿ ಕೆ.ವಿ.ಭೂಮಿಕಾ, ಮಹಮ್ಮದ್ ಮನ್ನಾನ್ ಕ್ರಮವಾಗಿ 6, 10ನೇ ರ‍್ಯಾಂಕ್ ಹಾಗೂ ಎಂಬಿಎನಲ್ಲಿ ಆರ್.ಕೆ.ಸ್ವಾತಿ 9ನೇ ರ‍್ಯಾಂಕ್ ಪಡೆದಿದ್ದಾರೆ. ಜಮೀರ್ ಅಸ್ಲಾಂ ಬಾರ್ಗಿರ್ ಜವಳಿ ವಿಭಾಗದಲ್ಲಿ, ಕೆ. ಸುಚಿತ್ರಾ ಎಂ.ಟೆಕ್ ಪರಿಸರ ತಂತ್ರಜ್ಞಾನ ವಿಭಾಗದಲ್ಲಿ ವಿಟಿಯು ಚಿನ್ನದ ಪದಕ ಪಡೆದು, ಕಾಲೇಜಿಗೆ ಕೀರ್ತಿ ತಂದಿದ್ದಾರೆ ಎಂದು ತಿಳಿಸಿದರು.

ಬಾಪೂಜಿ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಶಾಮನೂರು ಶಿವಶಂಕರಪ್ಪ, ಜಂಟಿ ಕಾರ್ಯದರ್ಶಿ ಎಸ್.ಎಸ್.ಮಲ್ಲಿಕಾರ್ಜುನ, ಅಧ್ಯಕ್ಷ ರಾಜನಹಳ್ಳಿ ರಮಾನಂದ, ಬಿಐಇಟಿ ಕಾಲೇಜು ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ, ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ, ವಿವಿಧ ವಿಭಾಗದ ಮುಖ್ಯಸ್ಥರು, ಡೀನ್‌ಗಳು, ಬೋಧಕರು ವಿದ್ಯಾರ್ಥಿಗಳ ಸಾಧನೆಗೆ ಅಭಿನಂದಿಸಿದ್ದಾರೆ. ರಾಜ್ಯದ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಒಂದಾದ ಬಿಐಇಟಿಯಲ್ಲಿ ಸುಮಾರು 25 ಸಾವಿರ ವಿದ್ಯಾರ್ಥಿಗಳು ಓದಿದ್ದು, ಈ ಪೈಕಿ 8 ಸಾವಿರಕ್ಕೂ ಅಧಿಕ ಜನರು ವಿಶ್ವದ ವಿವಿಧೆಡೆ ಪ್ರತಿಷ್ಠಿತ ಕಂಪನಿಗಳಲ್ಲಿ, ಸ್ವಂತ ಕಂಪನಿಗಳನ್ನು ಸ್ಥಾಪಿಸಿ ಕೊಂಡು ಸಾಧನೆ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಬೆಂಗಳೂರಿನ ರೋವ್ ಲ್ಯಾಬ್ಸ್ ಪ್ರೈ.ಲಿಮಿಟೆಡ್ ಸಹಯೋಗದಲ್ಲಿ ಕಾಲೇಜಿನಲ್ಲಿ ಸಾಕಷ್ಟು ಸಂಶೋಧನಾ ಯೋಜನೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಹೆಚ್ಚುತ್ತಿರುವ ಇಂಧನ ಬೆಲೆಗಳು, ವಾಯುಮಾಲಿನ್ಯ ತಡೆ, ಇಂಧನ ಉಳಿತಾಯದ ಅಗತ್ಯದ ಹಿನ್ನೆಲೆಯಲ್ಲಿ ಸೌರಶಕ್ತಿ ಪರಿಹಾರವಾಗಿದೆ. ವಿದ್ಯುತ್ ಚಾಲಿತ, ಹೈಬ್ರಿಡ್ ವಾಹನಗಳಲ್ಲಿ ಸೌರಶಕ್ತಿ ಬಳಕೆ ಕಾರ್ಯ ಸಾಧ್ಯ ವಿಧಾನವಾಗಿದೆ. ಹೈಬ್ರಿಡ್ ಸೌರಶಕ್ತಿ ಅಭಿವೃದ್ಧಿಪಡಿಸುವ ಪರಿಕಲ್ಪನೆಯ ಪಿವಿ-ಸೆಲ್ ಮತ್ತು ಡಿಎಸ್‌ಎಸ್‌ಸಿ ಸಂಯೋಜನೆಯಿಂದ ಅಡೆತಡೆ ಇಲ್ಲದೇ ನಿರಂತರ ಇ-ವಾಹನ ಚಲಾಯಿಸಲು ಸಾಧ್ಯವಾಗಬಹುದು. ಇಂತಹ ಅನೇಕ ಸಂಶೋಧನೆ ನಡೆದಿವೆ. ಅದೇ ರೀತಿ ಕೊಳಚೆ ನೀರಿನಿಂದ ದ್ರವರೂಪದ ನ್ಯಾನೋ ಗೊಬ್ಬರ ತಯಾರಿಸುವ ನಿಟ್ಟಿನಲ್ಲಿ ತಮ್ಮ ಕಾಲೇಜು ವಿದ್ಯಾರ್ಥಿಗಳು ಬೋಧಕರ ಮಾರ್ಗದರ್ಶನದಲ್ಲಿ ಮುಂದಾಗಿದ್ದಾರೆ ಎಂದು ಮಾಹಿತಿ ನೀಡಿದರು.

ಪ್ರಾಧ್ಯಾಪಕಿ ಡಾ.ಆಶಾಲತಾ ಮಾತನಾಡಿ, ಮಾ.14ರಂದು ಬೆಳಗ್ಗೆ 10.30ಕ್ಕೆ ಕಾಲೇಜಿನ ಎಸ್ಸೆಸ್ಸಂ ಸಾಂಸ್ಕೃತಿಕ ಸಭಾಂಗಣದಲ್ಲಿ ವಿಶ್ವ ಮಹಿಳಾ ದಿನಾಚರಣೆ ಹಮ್ಮಿಕೊಂಡಿದ್ದೇವೆ. ಡಾ.ಪ್ರಭಾ ಮಲ್ಲಿಕಾರ್ಜುನ, ಡಾ.ಟಿ.ಕೆ.ಅನುರಾಧ, ಡಾ. ಬಿ. ಇ.ರಂಗಸ್ವಾಮಿ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಕಾಲೇಜು ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ, ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ ಇತರರು ಪಾಲ್ಗೊಳ್ಳುವರು ಎಂದು ತಿಳಿಸಿದರು. ಕಾಲೇಜಿನ ಬೋಧಕ ಸಾರ್ವಜನಿಕ ಸಂಪರ್ಕ ಡೀನ್ ಡಾ.ಈ.ಪಿ.ದೇಸಾಯಿ, ಡಾ.ಶಂಕರಮೂರ್ತಿ, ಡಾ.ನಿರ್ಮಲ, ಡಾ.ಶರಣ್ ಇದ್ದರು.